ಓ ಎಸ್ ನಂ.53/2022

ಡಿ.ಡಬ್ಲ್ಯೂ-1 ಮಲ್ಲಿಕಾರ್ಜುನ ತಂದೆ ಗುರುಲಿಂಗಪ್ಪ ಗೋಳಸಾರ

**(ಇಂದು ದಿನಾಂಕಃ 27-01-2026 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಭೋದಿಸಲಾಯಿತು.)**

ಪಾಟೀ ಸವಾಲುಃ ಶ್ರೀ ಎ ಎಸ್ ಕೆ ವಕೀಲರಿಂದ.

ನಮ್ಮ ತಂದೆ ಗುರುಲಿಂಗಪ್ಪರವರಿಗೆ ನಾನು, ಬಿಂದುಸಾರ, ವಿಶ್ವನಾಥ, ಅನ್ನಪೂರ್ಣ, ಗೌರಾಬಾಯಿ ಮತ್ತು ಮೃತ ಅಶೋಕ ಮಕ್ಕಳಾಗಿರುತ್ತೇವೆ ಎಂದರೆ ಸರಿ. ನಮ್ಮ ತಂದೆ ಪಾಲಿಗೆ ೨೦ ಎಕರೆ ೩೦ ಗುಂಟೆ ಜಮೀನು, ೮ ಎಕರೆ ೨ ಗುಂಟೆ ಜಮೀನು ಬಂದಿತ್ತು. ಸಾಕ್ಷಿಯು ನಮ್ಮ ತಂದೆ ಇನ್ನೂ ೫ ಎಕರೆ ೧೦ ಗುಂಟೆ ಜಮೀನು ಇತ್ತು, ನಮ್ಮ ತಂದೆ ಅದನ್ನು ಮಾರಾಟ ಮಾಡಿರುತ್ತಾರೆ ಎನ್ನುತ್ತಾರೆ. ಸದರಿ ೫ ಎಕರೆ ೧೦ ಗುಂಟೆ ಜಮೀನಿನ ಸರ್ವೆ ನಂಬರ ನನಗೆ ಹೇಳಲು ನೆನಪಿಲ್ಲ. ೨೦ ಎಕರೆ ೩೦ ಗುಂಟೆ ಜಮೀನಿನ ಸರ್ವೆ ನಂಬರ ೧೩೬ ಇರುತ್ತದೆ. ೮ ಎಕರೆ ೨ ಗುಂಟೆ ಜಮೀನಿನ ಸರ್ವೆ ನಂಬರ ೩೭೭/೬ ಇರುತ್ತದೆ. ನನ್ನ ತಂದೆಯ ಹೆಸರಿನಲ್ಲಿ ಮನೆ ಇರುವುದಿಲ್ಲ. ಸಾಕ್ಷಿಯು ನನ್ನ ಹೆಂಡತಿಯ ಹೆಸರಿನಲ್ಲಿರುತ್ತದೆ ಎನ್ನುತ್ತಾರೆ. ಸದರಿ ಮನೆಯನ್ನು ನಾನು ಖರೀದಿ ಮಾಡಿರುತ್ತೇನೆ. ನನ್ನ ಹೆಂಡತಿಯ ಹೆಸರು ರೋಹಿಣಿ ಆಗಿರುತ್ತದೆ. ನನ್ನ ತಂದೆ ಸದರಿ ಮನೆಯನ್ನು ಬಾಷಾಸಾಬ ಅತ್ತರರವರಿಂದ ಖರೀದಿಸಿ, ನನ್ನ ಹೆಂಡತಿಯಾದ ರೋಹಿಣಿಯ ಹೆಸರಿನಲ್ಲಿ ಅದನ್ನು ಮಾಡಿರುತ್ತಾರೆ. ಸದರಿ ಮನೆಯ ಜಾಗೆ ೨೬ ಅಡಿ ಇಂಟು ೩೦ ಅಡಿ  ಇರುತ್ತದೆ.

೨. ನಮ್ಮ ತಂದೆ ಮಾರಾಟ ಮಾಡಿದ ೫ ಎಕರೆ ಜಮೀನು ಅತನೂರಿನಲ್ಲಿತ್ತು. ನಮ್ಮ ತಂದೆ ಅದನ್ನು ಬಿಟ್ಟು ಬೇರೆ ಯಾವುದೆ ಆಸ್ತಿ ಮಾರಾಟ ಮಾಡಿಲ್ಲ. ದಾವಾ ಜಮೀನುಗಳನ್ನು ಬಿಟ್ಟು ಬೇರೆ ಜಮೀನುಗಳು ಇರುವುದಿಲ್ಲ. ಸರ್ವೆ ನಂಬರ ೩೬೬ ರಲ್ಲಿ ೪ ಎಕರೆ ೧೦

ಗುಂಟೆ ಜಮೀನು ನಮ್ಮ ತಾಯಿಯಾದ ರತ್ನಾಬಾಯಿಯ ಹೆಸರಿನಲ್ಲಿ ಇತ್ತು ಎಂದರೆ ಸರಿಯಲ್ಲ. ೧೯೭೮ ರಲ್ಲಿ ನಮ್ಮ ತಂದೆ ೫ ಎಕರೆ ಜಮೀನನ್ನು ಮಾರಾಟ ಮಾಡಿರುತ್ತಾರೆ. ನಮ್ಮ ತಾಯಿಯಾದ ೧ನೇ ಪ್ರತಿವಾದಿ ೪ ಎಕರೆ ೧೦ ಗುಂಟೆ ಜಮೀನನ್ನು ಮಲ್ಲಮ್ಮ ಇಂಚಗೇರಿರವರಿಗೆ ಮಾರಾಟ ಮಾಡಿರುತ್ತಾರೆ ಎಂದರೆ ಸರಿ. ೧ನೇ ವಾದಿಯ ತಂದೆ ಅಶೋಕರವರು ನಮ್ಮ ತಂದೆಯ ದೊಡ್ಡಮಗನಾಗಿರುತ್ತಾರೆ. ಮಲ್ಲಮ್ಮರವರಿಗೆ ಜಮೀನು ಮಾರಾಟ ಮಾಡಿದ ಖರೀದಿ ಪತ್ರದಲ್ಲಿ ನನ್ನ ಮತ್ತು ನನ್ನ ಸಹೋದರರಾದ ವಿಶ್ವನಾಥ ಮತ್ತು ಬಿಂದುಸಾರರವರ ಸಹಿಗಳು ಇರುತ್ತವೆ ಎಂದರೆ ಸರಿ. ಸದರಿ ಖರೀದಿ ಪತ್ರದಲ್ಲಿ ನನ್ನ ಸಹೋದರನಾದ ಅಶೋಕರವರ ಮತ್ತು ಅಶೋಕರವರ ಹೆಂಡತಿ ಮತ್ತು ಮಕ್ಕಳ ಸಹಿಗಳು ಇರುವುದಿಲ್ಲ ಎಂದರೆ ಸರಿ.

೩. ನಮ್ಮ ತಂದೆ ಮೃತರಾದ ನಂತರ ನಮ್ಮ ಕುಟುಂಬದ ಎಲ್ಲಾ ಆದಾಯವನ್ನು ನಾನೇ ತೆಗೆದುಕೊಳ್ಳುತ್ತೇನೆ ಎಂದರೆ ಸರಿಯಲ್ಲ. ಸಾಕ್ಷಿಯು ೧೯೭೬ ರಲ್ಲಿಯೆ ನಮ್ಮ ತಂದೆ ಎಲ್ಲರಿಗೂ ಪಾಲು ಮಾಡಿಕೊಟ್ಟಿರುತ್ತಾರೆ ಅವರವರ ಪಾಲಿನ ಆಸ್ತಿಯ ಆದಾಯವನ್ನು ಅವರೆ ತೆಗೆದುಕೊಳ್ಳುತ್ತಾರೆ ಎನ್ನುತ್ತಾರೆ. ನನ್ನ ಸಹೋದರನಾದ ಅಶೋಕರವರಿಗೆ ಸರ್ವೆ ನಂಬರ ೩೨೨/೬ ರಲ್ಲಿ ೨ ಎಕರೆ ಜಮೀನು ಪಾಲಿಗೆ ಬಂದಿರುತ್ತದೆ. ಸದರಿ ಜಮೀನನ್ನು ಈಗ ಅಶೋಕರವರ ಹೆಂಡತಿಯೆ ಉಪಭೋಗ ಮಾಡುತ್ತಾರೆ.

ಮುಂದುವರೆದ ಪಾಟೀ ಸವಾಲಿಗೆ ಸಮಯ ಕೋರಿದ್ದರಿಂದ ಸಮಯ ನೀಡಲಾಯಿತು.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಲಾಯಿತು)

ಓ.ಹೇ.ಕೇ.ಸರಿ ಅದೆ

ಹಿರಿಯ ಸಿವಿಲ್ ನ್ಯಾಯಾಧೀಶರು
ಅಫಜಲಪೂರ.